ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲಾಖೆಯಲ್ಲಿ ಒಟ್ಟು 1633 ವಾಹನಗಳಿದ್ದು, ಇವುಗಳನ್ನು ಅಗತ್ಯಕ್ಕನುಸಾರವಾಗಿ ಹಾಗೂ ಕಾರ್ಯಕ್ರಮಗಳಿಗೆ ಅನುಗುಣವಾಗಿ ವಿವಿಧ ಜಿಲ್ಲೆಗಳಿಗೆ ಒದಗಿಸಲಾಗಿದೆ.

ಆ) 1310 ವಾಹನಗಳು ಉಪಯೋಗ ಸ್ಥಿತಿಯಲ್ಲಿದ್ದು ಉಳಿದ 323 ವಾಹನಗಳಲ್ಲಿ ಕೆಲವು ದುರಸ್ಥಿಗಾಗಿ ಹಾಗೂ ಕೆಲವು ಅನುಪಯೋಗ ಸ್ಥಿತಿಯಲ್ಲಿವೆ.

ಇ) ಅನುಪಯೋಗ ಸ್ಥಿತಿಯಲ್ಲಿರುವ ವಾಹನಗಳನ್ನು ನಿಷ್ಕ್ರಿಯಗೊಳಿಸಿ ವಿಲೇವಾರಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಇಲಾಖೆಯ ಕೇಂದ್ರೀಯ ಕಾರ್ಯಾಗಾರದಲ್ಲಿ ವಾಹನ ದುರಸ್ಥಿ ಕಾರ್ಯವನ್ನು ಸರ್ಕಾರದ ನಿಯಮದಂತೆ ವ್ಯವಸ್ಥಿತವಾಗಿ ನಿರ್ವಹಿಸುತ್ತಿದೆ.

**ಮುಲ್ಕಿ ಮೀನುಗಾರಿಕಾ ಬಂದರು**

543 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮುಲ್ಕಿ - ಮೀನುಗಾರಿಕಾ ಅಳಿವೆಯ ರಚನೆಯ ಬಗ್ಗೆ ತಜ್ಞರಿಂದ ಪರಿಶೀಲನಾ ಕಾರ್ಯವಾಗಿದೆಯೇ?*

*ಆ) ಅವರು ಯಾವ ತರಹದ ವರದಿ ಕೊಟ್ಟಿರುವರು.*

*ಇ) ಆ ಬಂದರಿನ ಕಾರ್ಯ ಯಾವಾಗ ಪ್ರಾರಂಭವಾಗುವುದು*

*ಈ) ಆ ಕಾರ್ಯಕ್ಕೆ ಒಟ್ಟು ಎಷ್ಟು ವೆಚ್ಚ ತಗಲುವುದು.*

*ಉ) ಕೇಂದ್ರದ ಸಹಾಯ ಪಡೆಯುವಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ?*

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಹೆಜಮಾಡಿ ಕೋಡಿ (ಮುಲ್ಕಿ)ಯನ್ನು ಮೀನುಗಾರಿಕಾ ಬಂದರಾಗಿ ಅಭಿವೃದ್ಧಿ ಪಡಿಸಲು ತಜ್ಞರಿಂದ ಪ್ರಾರಂಭಿಸಿದ ಪರಿಶೀಲನಾ ಕಾರ್ಯ ಮುಗಿದಿದೆ.

ಆ) ಅವರು ಅನುಕೂಲಕರ ವರದಿ ನೀಡಿರುವರು.

ಇ) 1994-95ನೇ ಸಾಲಿನಲ್ಲಿ ಈ ಕಾರ್ಯವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ) ಪ್ರಸ್ತುತ ಈ ಕಾರ್ಯಕ್ರಮಕ್ಕೆ ಒಟ್ಟು ರೂ. 100.00 ಲಕ್ಷಗಳ ಖರ್ಚು ತಗಲುವುದೆಂದು ಅಂದಾಜಿಸಲಾಗಿದೆ.

ಉ) ಕೇಂದ್ರ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅವರ ಆದೇಶದ ಮೇರೆಗೆ ಮೀನುಗಾರಿಕೆ ತಂಗುದಾಣ ಕಳೆದಾಣ ನಿರ್ಮಾಣಕ್ಕೆ ಬೇಕಾಗಿರುವ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡು ಬಂದು ವರದಿಯನ್ನು ಕೇಂದ್ರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

**ಹೊಳೆನರಸೀಪುರ ತಾಲ್ಲೂಕಿನಲ್ಲಿ ಕಾಯಿಲೆಯಿಂದ ರಾಸುಗಳು ಸಾಯುತ್ತಿರುವ ಬಗ್ಗೆ.**

545 - ಶ್ರೀ ಜಿ.ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?